ದಿನ ಅಪ್ಪ ಅಪರೂಪಕ್ಕೆ ಮಧ್ಯಾಹ್ನವೇ ಮನೆಗೆ ಬಂದಿದ್ದ. ನಾಲ್ಕನೆಯ ತರಗತಿಯ ಶಾಲೆಗೆ ರಜೆ ಬಿಟ್ಟ ಮಾರನೆಯ ದಿನವೇ. ತನ್ನನ್ನು ಆಸ್ಪತ್ರೆಯ ಹೊರಗೆ ದಿನವಿಡೀ ಒಣಗಲು ಬಿಟ್ಟು, ರೂಮಿನಿಂದ ರೂಮಿಗೆ ಓಡಾಡಿ ಬಂದ ಇಬ್ಬರೂ ಒಮ್ಮೆಲೆ ತನ್ನ ಮೇಲೆ ಪ್ರೀತಿ ಸುರಿಸತೊಡಗಿದ್ದು ಇನ್ನಾದರೂ ಆಕೆಗೆ ಅರ್ಥವಾಗಿಲ್ಲ.

ಕೇಳದೆಯೆ ಹಠಮಾಡದೆಯೇ ಅಂದು ಸೈಕಲ್ ಶಾಪಿಗೆ ಹೋಗಿ ಹಳೆಯ ಸೈಕಲ್ಲನ್ನು ಕೊಡಿಸಿಕೊಂಡು ಬಂದಿದ್ದರು. ಅಮ್ಮ ಅಂದಿನಿಂದ ಹತ್ತಿರ ಮಲಗಿಸಿಕೊಳ್ಳುತ್ತಿರಲಿಲ್ಲ. ಅಪ್ಪ ಕತ್ತಲಾಗುವುದಕ್ಕೆ ಮುಂಚೆ ಬಂದು ಬಿಡುತ್ತಿದ್ದ. ಒಮ್ಮೊಮ್ಮೆ ಸರಿಯಾಗಿ ಬೇಯದ ಗಂಜಿ ಮಾಡಿ ಬಡಿಸಿ, ‘ಅಯ್ಯೋ... ಮಿಸ್ಟೀಕಾಗಿ ಹೋಯ್ತಲ್ಲೇ ನೆಕ್ಸ್ಟ್ ಟೈಮ್... ಗುಡ್...’ ಅನ್ನುತ್ತ ನಗಿಸಲು ಪ್ರಯತ್ನಿಸುತ್ತಿದ್ದ. ತರಗತಿ ದಾಟಿದಂತೆ ಶಾಲೆಯ ಓದು ಬರವಣಿಗೆ ಹೆಚ್ಚಾಯಿತು. ಸೈಕಲ್ಲು ಸಿಕ್ಕಿದ್ದೇ ಸಣ್ಣ ತಿರುಗಾಟವೂ ಅದರೊಂದಿಗಿನ ಆಟವೂ ಹೆಚ್ಚಾಯಿತು. ಸಂಜೆ ಅಪ್ಪ ಮನೆಯಲ್ಲಿ ಇರುತ್ತಿದ್ದ ಕಾರಣ ಸಂಜೆಗತ್ತಲು, ಅರೆಗತ್ತಲು, ಮಬ್ಬುಗತ್ತಲಿನಲ್ಲಿ ಬೇಲಿಸಾಲಿನಲ್ಲಿ ಓಡಾಡಲು ಅಮ್ಮ ಧೈರ್ಯದಿಂದ ಬಿಡುತ್ತಿದ್ದಳು. ಜಾಣೆಯೊಬ್ಬಳು ಶಾಲೆ ಬದಲಿಸಿದ್ದರಿಂದಲೋ, ತನಗೆ ಸೈಕಲ್ ಸಿಕ್ಕಿದ್ದರಿಂದಲೋ, ಅಪ್ಪ ಬೇಗ ಬರುತ್ತಿದ್ದರಿಂದಲೋ, ತರಗತಿಯಲ್ಲಿ ಈಗ ಮೊದಲ ಹೆಸರು ತನ್ನದು ಎಂದು ನಿತ್ಯ ಊಟದ ಸಮಯದಲ್ಲಿ ಹೆಮ್ಮೆಯಿಂದ ಹೇಳುವಂತಾಗಿತ್ತು.

ಅಪ್ಪ ಹೋದ ನಂತರ ಹೊರಬಂದ ಅಮ್ಮ ಬಚ್ಚಲಿಗೆ ನಡೆದು ಉರಿವ ಕೊಳ್ಳಿಯನ್ನು ಒಳಗೆ ದಬ್ಬಿ ಉರಿ ಹೆಚ್ಚಿಸಿ, ಹೊರಗೆ ಬಂದು ಸೊಂಟದ ಮೇಲೆ ಕೈಯಿಟ್ಟು ನಿಂತು ಮಗಳೆಡೆ ನೋಡಿ, ಇನ್ನು ನಿನ್ನ ಮೀಯುವ ಸಮಯ ಸಮೀಪಿಸಿತು ಎಂದು ಸೂಕ್ಷ್ಮವಾಗಿ ಎಚ್ಚರಿಸಿ ಒಳಗೆ ನಡೆದ ಐದತ್ತು ನಿಮಿಷದಲ್ಲಿ ಹಂಡೆಯಲ್ಲಿನ ನೀರು ಕೊಸ್ ಎಂದು ಎಚ್ಚರಿಸಿ ಅಮ್ಮ ‘ಮಿಂದ್ಕ ಹೋಗೇ’ ಎಂದು ಪದೇ ಪದೇ ಕೂಗುವಷ್ಟರಲ್ಲಿ ಅಜ್ಜ ಕಾಣಿಸಿಕೊಳ್ಳುತ್ತಿದ್ದ. ಚಳಿಯಿರಲಿ, ಮಳೆಯಿರಲಿ, ಬಿಸಿಲಿರಲಿ, ಮಂಜು ಮುಸುಕಿರಲಿ ಅಜ್ಜ ಬಿಳಿ ಪಂಚೆ, ಬರಿ ಮೈಮೇಲೊಂದು ಕೆಂಪು ಶಲ್ಯದಲ್ಲಿ, ಎಡಗೈಯಲ್ಲಿ ಪೂಜಾಸಾಮಗ್ರಿಗಳಿರುವ ಹಿತ್ತಾಳೆಯ ಎಲೆಗಳ ಚಿತ್ತಾರವಿರುವ ಪುಟ್ಟಿ ಹಿಡಿದು, ಖಾಲಿಬಲಗೈಯಲ್ಲಿ

